**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ:592/2014**

**ಪಿ.ಡಬ್ಲೂ: 3**

**ಪ್ರಮಾಣೀಕರಿಸಿದ ದಿನಾಂಕ: 13-01-2026**

| | |
|---|---|
| **ಹೆಸರು** | **ರವಿಶೇಖರ್ ಬಿ** |
| **ತಂದೆಯ ಹೆಸರು** | **ಬಲರಾಮಪ್ಪ** |
| **ವಯಸ್ಸು** | **42 ವರ್ಷ** |
| **ವೃತ್ತಿ** | **ಮುಖ್ಯ ಪೇದೆ, ಬಂಗಾರಪೇಟೆ ಪೋಲೀಸ್ ಠಾಣೆ** |
| **ವಾಸ** | **ಬಂಗಾರಪೇಟೆ** |

**ಕಲಂ 299 ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಸಾಕ್ಷ್ಯ ವಿಚಾರಣೆ**

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

1. ನಾನು ಸುಮಾರು 3 ವರ್ಷಗಳಿಂದ ಬಂಗಾರಪೇಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ಈ ಪ್ರಕರಣದ ಆರೋಪಿಯ ವಿರುದ್ಧ ಪ್ರೊಕ್ಲಾಮೇಷನ್ ವಾರೆಂಟನ್ನು ಪಡೆದುಕೊಂಡು ದಿ:24.11.2023 ರಂದು ಆರೋಪಿಯ ವಿಳಾಸಕ್ಕೆ ಹೋಗಿ ಅಲ್ಲಿ ವಿಚಾರಿಸಿ ಆತನ ವಿರುದ್ಧ ಉದ್ಘೋಷಣಾ ವಾರೆಂಟನ್ನು ಜಾರಿಗೊಳಿಸಿ ಅಲ್ಲಿ ಇದ್ದ ಪಂಚರಾದ ವೆಂಕಟೇಶಪ್ಪ ಮತ್ತು ಜನಾರ್ದನ್ ರೆಡ್ಡಿ ರವರ ಸಹಾಯದಿಂದ ಉದ್ಘೋಷಣಾ ಮಹಜರನ್ನು ಮಾಡಿ ಆರೋಪಿಯ ವಿರುದ್ಧ ಟಾಂಟಾಂ ಹೊರಡಿಸಿರುತ್ತೇನೆ. ನಂತರ ನಾನು ಸದರಿ ಪ್ರೊಕ್ಲಾಮೇಷನನ್ನು ಆರೋಪಿಯುವಾಸವಿದ್ದ ಬಾಡಿಗೆ ಮನೆಯಲ್ಲಿ, ಕಾವೇರಿ ಸ್ಟೀಲ್ ಅಂಗಡಿಯಲ್ಲಿ, ವಿಶ್ವೇಶ್ವರಯ್ಯ ಬಸ್ ನಿಲ್ದಾಣದ ಬಳಿ, ನಗರ ಸಭೇಯಲ್ಲಿ, ಕೆಜಿ ಹಳ್ಳಿ ಪೋಲೀಸ್ ಠಾಣೆಯ ನೋಟೀಸ್ ಬೋರ್ಡಿನಲ್ಲಿ ನ್ಯಾಯಾಲಯದ ಆವರಣದಲ್ಲಿ ಅಂಟಿಸಿ ಜಾರಿಗೊಳಿಸಿರುತ್ತೇನೆ. ನಂತರ ಆ ಸಮಯದಲ್ಲಿ ನನಗೆ ಸಿಕ್ಕಿದ ಮಾಹಿತಿ ಏನೆಂದರೆ ಆರೋಪಿಯು ಸುಮಾರು 2 ವರ್ಷಗಳಿಂದ ಸದರಿ ಬಾಡಿಗೆ ಮನೆಯನ್ನು ಖಾಲಿ ಮಾಡಿ ಬೇರೆಲ್ಲೋ ಹೋಗಿದ್ದು ಅದರ ಬಗ್ಗೆ ಇತರ ಮಾಹಿತಿ ಲಭ್ಯವಾಗಿರುವುದಿಲ್ಲ. ನಂತರ ನಾನು ಸದರಿ ಮಹಜರು ಕ್ರಮವನ್ನು ಜಾರಿಗೊಳಿಸಿ ಸದರಿ ಪಂಚರ ಸಮಕ್ಷಮ ಮ.3.00 ರಿಂದ 5.00 ರವರೆಗೆ ಮಹಜರನ್ನು ಬರೆದಿರುತ್ತೇನೆ. ಆ ಸಮಯದಲ್ಲಿ ನಾನು ಪಂಚರ ಸಹಿಗಳನ್ನು ಪಡೆದಿರುತ್ತೇನೆ.

3. ಸಾಕ್ಷಿಯು ಈಗ ಒಂದು ದಾಖಲೆಯನ್ನು ತೋರಿಸಲಾಗಿ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆ ಉದ್ಘೋಷಣಾ ಪಂಚನಾಮೆ ಆಗಿದ್ದು ಅದನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4 ಎ ಎಂದು ಗುರುತಿಸಲಾಯಿತು. ಸದರಿ ಆರೋಪಿಯ ಆಸ್ತಿಗಳಿಗೆ ಸಂಬಂದ ಪಟ್ಟಂತೆ ಕಾಡುಗೊಂಡನಹಳ್ಳಿ ಕಂದಾಯಿ ಅದಿಕಾರಿಗೆ ಪತ್ರ ವ್ಯವಹಾರ ಮಾಡಿದ್ದು ಅವರು

ಆರೋಪಿಯ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದು ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.5 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**Sd/-**
**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**

-

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ: 1021/2023**

**ಸಿ.ಡಬ್ಲೂ: 7/ಪಿ.ಡಬ್ಲೂಃ 3**

**ಪ್ರಮಾಣೀಕರಿಸಿದ ದಿನಾಂಕಃ 03.04.2024**

| | |
|---|---|
| **ಹೆಸರು** | ಸನಾವುಲ್ಲಾ |
| **ತಂದೆಯ ಹೆಸರು** | ಬಷೀರ್ ಸಾಬ್ |
| **ವಯಸ್ಸು** | 45 ವರ್ಷ |
| **ವೃತ್ತಿ** | ಕೂಲಿ |
| **ವಾಸ** | ದೊಡ್ಡ ಗಾಂಡ್ಲಹಳ್ಳಿ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ಚಾಸಾ 1 ರಿಂದ 6 ಗೊತ್ತಿಲ್ಲ. ಚಾಸಾ 8 ಮತ್ತು ಆರೋಪಿ ಪರಿಚಯ.

ಸಾಕ್ಷಿಯು ನಿಪಿ-2 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಸುಮಾರು 1 ವರ್ಷದ ಹಿಂದೆ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯಂತೆ ಸಹಿ ಮಾಡಿರುತ್ತೇನೆ. ನಿಪಿ-2 ರ ಪಂಚನಾಮೆಯಲ್ಲಿರುವ ಅಂಶಗಳು ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ಹಣ ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಪೊಲೀಸರು ತನ್ನನ್ನು ವಿಚಾರಣೆ ಮಾಡಿಲ್ಲ. ತಾನು ಸಹ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಹಾಲಿ ಪ್ರಕರಣದ ಬಗ್ಗೆ ಬೇರೇನೂ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಮಹಜರ್ ಸಾಕ್ಷಿದಾರರಾಗಿದ್ದು ಅದರ ಅಂಶಗಳಿಗೆ ಮತ್ತು ತನ್ನ ಹೇಳಿಕೆಗೆ ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ

ದಿಃ 17.04.2023 ರಂದು ತನ್ನ ಮತ್ತು ಚಾಸಾ-8 ರವರ ಸಮಕ್ಷಮ ಚಾಸಾ-1 ರಿಂದ 6 ರವರು ಚುನಾವಣೆ ಕರ್ತವ್ಯದಲ್ಲಿ ಇರುವಾಗ ಆರೋಪಿ ರೂ.50,000/- ಗಳಿಗಿಂತ ಹೆಚ್ಚಿನ ಹಣವನ್ನು ಯಾವುದೇ ದಾಖಲೆ ಇಲ್ಲದೇ ತೆಗೆದುಕೊಂಡು ಹೋಗಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆ ಮಾಡಿದಾಗ ಚಾಸಾ-1 ರಿಂದ 6 ರವರು ದ್ವಿಚಕ್ರ ವಾಹನ ಮತ್ತು ನಗದನ್ನು ಆರೋಪಿಯಿಂದ ತಮ್ಮ ಸಮಕ್ಷಮ ಅಮಾನತು ಪಡಿಸಿಕೊಂಡು ನಿಪಿ-2 ರ ಸ್ಥಳ ಪಂಚನಾಮೆಯನ್ನು ಸಂಜೆ 2.45 ರಿಂದ 3.45 ರವರೆಗೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತಾನು ಮತ್ತು ಚಾಸಾ 1 ರಿಂದ 6, 8 ರವರು ನಿಪಿ 2 ರ ಪಂಚನಾಮೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ತಾನು ಮೇಲಿನಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ಸಾಕ್ಷಿ ಅಲ್ಲೆಗೆಳದ ಕಾರಣ ಹೇಳಿಕೆ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ2 ರ ಸ್ಥಳ ಪಂಚನಾಮೆಯ ಬಗ್ಗೆ

ಗೊತ್ತಿದ್ದರೂ ಸಹ ಆರೋಪಿ ತಮ್ಮ ಊರಿನವನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-ಆರೋಪಿ ಪರ ಶ್ರೀ ಬಿ ಡಿ ವಕೀಲರಿಂದಃ- ಇಲ್ಲ**

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ, ಕೆಜಿಎಫ್.**